**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>**

**<u>ಸಿ. ಸಿ. ನಂಬರಃ 668/2025</u>**

**<u>ಫಿರ್ಯಾದುದಾರರು:</u>**

ಶ್ರೀ ಪ್ರಭುಲಿಂಗ ತಂದೆ ಶಾಂತಪ್ಪ ಕೆಂಗಣ್ಣನವರ,
ಮಾಲಕರು ಅಮೃತ ಅಗ್ರೋ ಟ್ರೇಡರ್ಸ್
ಸಾ: ಹುಬ್ಬಳ್ಳಿ ಶಿರಸಿ ರಸ್ತೆ, ಬಸ್ ಸ್ಟಾಂಡ್ ಎದುರಿಗೆ,
ತಾ: ಮುಂಡಗೋಡ, ಉ.ಕ.

**– ವಿರುಧ್ಧ –**

**<u>ಆರೋಪಿ:</u>**

ಶ್ರೀ ಚರಂತಯ್ಯಾ ತಂದೆ ಪುಟ್ಟಯ್ಯಾ ಹಿರೇಮಠ,
ಪ್ರಾಯ: 38, ಉ: ರೈತಾಬಿ,
ಪಟ್ಟಣ ಪಂಚಾಯತ ಹತ್ತಿರ,
ಚರ್ಚ ಪಕ್ಕ, ಹುಬ್ಬಳ್ಳಿ– ಶಿರಸಿ ರಸ್ತೆ,
ಸಾ: ಮುಂಡಗೋಡ, ತಾ: ಉತ್ತರ ಕನ್ನಡ.

**<u>ಆಪಾದನೆ</u>**

ಆರೋಪಿತರಾದ ನೀವು ಪಿರ್ಯಾದುದಾರರಿಗೆ ಪರಿಚಯಸ್ಥರಿದ್ದು, ಫಿರ್ಯಾದಿದಾರರು ಅಮೃತ್ ಅಗ್ರೋ ಟ್ರೇಡರ್ಸ್ ಮಾಲಿಕರಾಗಿದ್ದು, ಆರೋಪಿಯಾದ ನೀವು ಕಲ್ಲಂಗಡಿ ಮತ್ತು ಗೋವಿನ ಜೋಳದ ಬೆಳೆ ಬೆಳೆಯಲು 1)ದಿನಾಂಕ 23–05–2024MON.DKC.9178 4 ಕೆಜಿ ಯ 18 ಪಾಕೆಟ್, PIONEER3501 4 ಪಾಕೆಟ್, HYTECH5109 6 ಪಾಕೆಟ್, ರಖಂ ರೂ.42,400/–, 2)ದಿನಾಂಕ 2–10–2024 ರಂದು N P K 19:19:19 25 ಕೆಜಿ ಯ 5 ಪಾಕೆಟ್, N P K 19:19:19 50 ಪಾಕೆಟ್, JIVARAS 1Ltr 10 ಬಾಟಲ್, ರಖಂ ರೂ.32,750/–, 3) ದಿನಾಂಕ 10–10–2024 ರಂದು N P K 12:61:00 25 ಕೆಜಿ ಯ 5 ಪಾಕೆಟ್, N P K 12:61:00 1 ಕೆಜಿ ಯ 20 ಪಾಕೆಟ್, ರಖಂ ರೂ.36,250/–, 4) ದಿನಾಂಕ

15-10-2024 Exponus 34ml 5 ಬಾಟಲ್, POLYRAM-800GM 8 ಪಾಕೆಟ್, P I Biovita(Liquid) 1 Ltr 5 ಬಾಟಲ್, ರಖಂ ರೂ.21,436/-, 5) ದಿನಾಂಕ 02-11-2024 ರಂದು N P K 00:52:34 5 ಕೆಜಿ ಯ 4 ಪಾಕೆಟ್, ರಖಂ ರೂ.25,000/-, 6) ದಿನಾಂಕ 10-11-2024 ರಂದು N P K 00:00:50 25 ಕೆಜಿ ಯ 6 ಪಾಕೆಟ್, N P K 00:00:50 1 ಕೆಜಿ ಯ 15 ಪಾಕೆಟ್, ರಖಂ ರೂ. 29,700/-, ಒಟ್ಟೂ ರಖಂ ರೂ.1,87,536/-ಗಳ ಔಷದಿ ಮತ್ತು ಗೊಬ್ಬರಗಳನ್ನು ಖರೀದಿಸಿ, ದಿನಾಂಕ 27-05-2024 ರಂದು ರೂ.1,00,000/-ಗಳನ್ನು ಫಿರ್ಯಾದಿಯಿಂದ ಜಮೀನಿನ ಉಳುಮೆ ಮಾಡಲು ಮತ್ತು ಆಳುಗಳಿಗೆ ಕೂಲಿ ನೀಡಲು ಅಂತಾ ರೂ.1,00,000/-ಗಳನ್ನು ಕೈಗಡ ಅಂತಾ ಹಣ ಕೇಳಿದ್ದರಿಂದ ಫಿರ್ಯಾದಿಯು ಆರೋಪಿಯಾದ ನಿಮ್ಮಗೆ ನಗದಾಗಿ ರೂ.1,00,000/-ಗಳನ್ನು ನೀಡಿರುತ್ತಾರೆ, ಒಟ್ಟೂ ರೂ.2,87,536/-ಗಳನ್ನು ಪಡೆದಿದ್ದು, ಅದನ್ನು ಮುಂದಿನ 5 ತಿಂಗಳಲ್ಲಿ ಕೊಡುವುದಾಗಿ ಹೇಳಿ, ಆದರೆ ನೀವು ಮಾತಿನಂತೆ ನಡೆದುಕೊಳ್ಳದೆ ಇಂದು ನಾಳೆ ಅಂತಾ ವಿಳಂಬ ಮಾಡುತ್ತಾ ಬಂದಿರುತ್ತಿರಿ. ತದನಂತರ ನೀವು ದಿನಾಂಕ 04-06-2025 ರಂದು ನಿಮ್ಮ ಖಾತೆ ಇರುವ ಬ್ಯಾಂಕ ಆಫ್ ಬರೊಡಾ, ಕಾತೂರ ಶಾಖೆ ಚೆಕ್ಕ ನಂಬರ್ 000016 ದಿನಾಂಕ 04-06-2025 ಎಂದು ನಮೂದಿಸಿದ ಅಸಲು ರೂ.2,87,536/- ಜೊತೆ ಬಡ್ಡಿ ಸೇರಿಸಿ ಒಟ್ಟು ರೂ.3,00,000/-ಗಳ ಮೊತ್ತಕ್ಕೆ ಚೆಕನ್ನು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸದ್ರಿ ಚೆಕ್ಕನ್ನು ಅವರ ಖಾತೆ ಇರುವ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ, ಮುಂಡಗೋಡ ಶಾಖೆಗೆ ದಿನಾಂಕ 04-06-2025 ರಂದು ಸದರಿ ಬ್ಯಾಂಕಗೆ ನಗಧೀಕರಣಕ್ಕಾಗಿ ಹಾಜರ ಪಡಿಸಿದಾಗ, ನೀವು ಹೊಂದಿರುವ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ" ಎಂದು ನಮೂದು ಮಾಡಿ ದಿನಾಂಕಃ 05-06-2025 ರಂದು ಮೇಮೋದೊಂದಿಗೆ ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 28-06-2025 ರಂದು ತಮ್ಮ ವಕೀಲರ ಮೂಲಕ ನೋಟಿಸ್‌ನ್ನು ನಿಮಗೆ ನೀಡಿದ್ದು, ಸದರಿ ನೋಟಿಸ್ಸನ್ನು ನೀವು ತೆಗೆದುಕೊಳ್ಳದೆ 'Door Lock Intimation Served' ಅಂತಾ

ದಿನಾಂಕ 30-06-2025 ರಂದು ವಾಪಸ್ಸ ಬಂದಿರುತ್ತದೆ. ಆದರೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ - ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ -

ಪ್ರಶ್ನೆ - ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ -

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 12-12-2025

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ.